## ದಿ:23.06.2017 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಜಲಸಂಪನ್ಮೂಲ ಇಲಾಖೆ ಇವರ ಅಧ್ಯಕ್ಷತೆಯಲ್ಲಿ, ಮುಖ್ಯ ಇಂಜಿನಿಯರ್ ನೀರಾವರಿ ಕೇಂದ್ರ ವಲಯ ಮುನಿರಾಬಾದ್ ಗೆ ಸಂಬಂಧಿಸಿದ ಕಾಮಗಾರಿಗಳ ಬಗ್ಗೆ ನಡೆದ ಸಭೆಯ ನಡವಳಿಗಳು.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಲಗತ್ತಿಸಿದೆ.

*****

ಸಭೆಯಲ್ಲಿ ಹಾಜರಿದ್ದ, ಅಧಿಕಾರಿಗಳನ್ನು ಅಧ್ಯಕ್ಷರು ಸ್ವಾಗತಿಸಿದರು.

ಮೊದಲನೆಯದಾಗಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರು ಕೈಗೊಂಡ ತುರ್ತು ಕಾಮಗಾರಿಗಳ ಬಗ್ಗೆ ವಿವರಣೆ ನೀಡಿದರು,

1) ವಡ್ಡರಹಟ್ಟಿ ವಿಭಾಗದ ವ್ಯಾಪ್ತಿಯಲ್ಲಿ ಬರುವ ಕನಕಗಿರಿಯಿಂದ ಕಾರಟಗಿ ರಾಜ್ಯ ಹೆದ್ದಾರಿಯಲ್ಲಿ ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆ ಚೈನ್-2300 (ಕಿ.ಮೀ-69) ಮೈಲ್-43ರಲ್ಲಿ ಅಡ್ಡಲಾಗಿ ನಿರ್ಮಿಸಲಾದ ಸುಮಾರು 50 ರಿಂದ 55 ವರ್ಷಗಳ ಸೇತುವೆಯು ದಿನಾಂಕ:16.09.2016 ರಂದು ಸಂಪೂರ್ಣವಾಗಿ ಕುಸಿದು ಕಾಲುವೆಯಲ್ಲಿ ಬಿದ್ದಿರುತ್ತದೆ. ಮುಖ್ಯ ಕಾಲುವೆ ಸೋಮನಾಳ ಕ್ಯಾಂಪಿನಿಂದ ದುರ್ಗಾ ಕ್ಯಾಂಪಿನವರೆಗೆ ಹಾಗೂ ಸೋಮನಾಳ ನವಲಿ ಕನಕಗಿರಿ ಗ್ರಾಮಕ್ಕೆ ಹೋಗಲು ಬೇರೆ ರಸ್ತೆಯಿಲ್ಲದೆ ಮುಖ್ಯ ಕಾಲುವೆಯ ಬಲಭಾಗದ ಸರ್ವೀಸ್ ರಸ್ತೆಯನ್ನೇ ಬಳಸುತ್ತಿರುವುದನ್ನು ಗಮನಿಸಿದಾಗ, ಮುಖ್ಯ ಕಾಲುವೆ ಸರ್ವೀಸ್ ರಸ್ತೆಯು ತುಂಬಾ ತಗ್ಗು ದಿನ್ನೆಗಳಿಂದ ಕೂಡಿರುವುದರಿಂದ, ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.2, ಕಾಲುವೆ ಉಪ ವಿಭಾಗ, ಕಾರಟಗಿ ಇವರು ಸದರಿ ರಸ್ತೆಗೆ ಮುರ್ರಂ (Gravel) ಹಾಕಿ ದುರಸ್ತಿ ಕಾರ್ಯ ಕೈಗೊಂಡಿರುತ್ತಾರೆ.

2) ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆ ವ್ಯಾಪ್ತಿಯಲ್ಲಿ ಬರುವ ಮೈಲ್-36 (ಕಿ.ಮೀ-60.00)ರಲ್ಲಿ ಸರಪಳಿ 1947 ಬಲಭಾಗದ ವಿತರಣಾ ಕಾಲುವೆ 27ರ (ಡಂಕನಕಲ್ ಗ್ರಾಮದ ಹತ್ತಿರ) ಬಲಬದಿಯ ಕಾಲುವೆಯಲ್ಲಿ ದಿನಾಂಕ: 05.10.2015 ರಂದು ಉಂಟಾದ ಬೊಂಗಾವನ್ನು ತಡೆಗಟ್ಟಲು ಮುಖ್ಯ ಇಂಜಿನಿಯರರು ಪರಿಶೀಲಿಸಿ ಪೈಪಿಂಗ್ ರೆಸ್ಟೋರೇಶನ್ ಕಾಮಗಾರಿಯನ್ನು ತುರ್ತು ಕಾಮಗಾರಿಯೆಂದು ಪರಿಗಣಿಸಿ, ಟೆಂಡರ್ ಕರೆಯದೆ ನೇರವಾಗಿ ಗುತ್ತಿಗೆದಾರರಿಗೆ ವಹಿಸಿ ಸಮರ್ಪಕವಾಗಿ ಪೂರ್ಣಗೊಳಿಸಿ ನೀರಿನ ಸೋರಿಕೆಯನ್ನು ತಡೆಗಟ್ಟಿರುತ್ತಾರೆ.

3) ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆ ವ್ಯಾಪ್ತಿಯಲ್ಲಿ ಬರುವ ಮೈಲ್-40 (ಕಿಮೀ-64)ರಲ್ಲಿ ಸರಪಳಿ 2128 ಬಲಬದಿ ಅಕ್ವಡಕ್ಟ್ ಚೈನ್ 2127ರ ಮೇಲ್ಭಾಗದಲ್ಲಿ ದಿನಾಂಕ: 27.07.2016 ರಂದು ಪೈಪಿಂಗ್ ಉಂಟಾಗಿದ್ದು ಅದನ್ನು ತಡೆಗಟ್ಟಲು ತುರ್ತಾಗಿ ಕಾಲುವೆ ಮಣ್ಣಿನ ಏರಿಯಾ ಮಧ್ಯ ಭಾಗದಲ್ಲಿ ಕಪ್ಪು ಮಣ್ಣಿನಿಂದ ಪೆಡಲಿಂಗ್ ಮಾಡಿ ಅಕ್ವಡಕ್ಟ್ ಚೈನ್-2127ರ ಮೇಲ್ಭಾಗದ ಬಲಬದಿ ಭದ್ರಗೊಳಿಸಿ ದುರಸ್ಥಿಯನ್ನು ಕಾರ್ಯಪಾಲಕ ಇಂಜಿನಿಯರ್, ವಡ್ಡರಹಟ್ಟಿ ವಿಭಾಗ ಇವರು ಕಾರ್ಯನಿರ್ವಹಿಸಿರುತ್ತಾರೆ.

Scanned by CamScanner

4) ತುಂಗಭದ್ರಾ ಎಡದಂಡೆ ಮೇಲ್ಮಟ್ಟದ ಕಾಲುವೆ (ಎಲ್‌ಬಿಹೆಚ್‌ಎಲ್‌ಸಿ) ಕಿ.ಮೀ.0.50,3.00,3.40,6.10 ಮತ್ತು 9.20 ರಲ್ಲಿ ಹೂಳು ಮತ್ತು ನೀರಿನಲ್ಲಿ ಬೆಳೆದ ಬಳ್ಳಿಯಿಂದಾಗಿ ಕಾಲುವೆಯಲ್ಲಿ ನೀರು ಓವರ್ ಫ್ಲೋ ಆಗಿ ಕಾಲುವೆಯ 2 ಬದಿಗಳಲ್ಲಿ ನೀರು ಪೋಲಾಗುತ್ತಿರುವುದರಿಂದ ಕಾಲುವೆಯಲ್ಲಿ ನೀರು ಸರಿಯಾಗಿ ಹರಿಯದೆ ಕೊನೆಯ ಭಾಗದ ರೈತರಿಗೆ ತೊಂದರೆಯಾಗುವುದನ್ನು ತಡೆಗಟ್ಟಲು ದಿನಾಂಕ:02.01.2015 ರಂದು ಸ್ಥಳೀಯ ಗುತ್ತಿಗೆದಾರರಿಗೆ ಕಾಮಗಾರಿಯನ್ನು ವಹಿಸಿಕೊಟ್ಟು ಪೂರ್ಣಗೊಳಿಸಿರುತ್ತಾರೆ.

ಕೇಂದ್ರ ನೀರಾವರಿ ವಲಯ ಮುನಿರಾಬಾದ್ ವ್ಯಾಪ್ತಿಗೆ ಬರುವ ಅನೇಕ ತುರ್ತು ಕಾಮಗಾರಿಗಳನ್ನು ವಿಳಂಬವಾಗಿ ಸಲ್ಲಿಸುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರದಿಂದ ಈಗಾಗಲೇ ಹೊರಡಿಸಿರುವ ಸುತ್ತೋಲೆ ಸಂಖ್ಯೆ:ಜಸಂಇ 161 ಎನ್‌ಹೆಚ್‌ಪಿ 2015, ದಿನಾಂಕ:31-05-2016 ರನ್ವಯ ಹಿರಿಯ ಅಧಿಕಾರಿಗಳು ಘಟನಾ ಸ್ಥಳಕ್ಕೆ ಭೇಟಿ ನೀಡಿ, ಪರಿವೀಕ್ಷಿಸಿ, ಘಟನೆ ಸಂಭವಿಸಿದ್ದಕ್ಕೆ ಕಾರಣಗಳು, ದುರಸ್ಥಿ ಕಾಮಗಾರಿಯ ವಿವರ, ತುರ್ತಾಗಿ ಕಾಮಗಾರಿ ತೆಗೆದುಕೊಳ್ಳಲು ಸಮಂಜಸ ಕಾರಣಗಳು ಹಾಗೂ ಇದಕ್ಕೆ ತಗಲುವ ಸಮಯ ಮತ್ತು ಅಂದಾಜು ವೆಚ್ಚದ ಬಗ್ಗೆ ಮಾಹಿತಿಯನ್ನು ಘಟನೆ ನಡೆದ ಮೂರು ದಿನಗಳೊಳಗೆ ತಪ್ಪದೇ ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಎಂದು ಸೂಚಿಸಲಾಯಿತು.

ಮೇಲ್ಕಂಡ ಕಾಮಗಾರಿಗಳನ್ನು ಅಧೀಕ್ಷಕ ಅಭಿಯಂತರರು ಹಾಗೂ ಮುಖ್ಯ ಇಂಜಿನಿಯರ್ ರವರ ನೇತೃತ್ವದಲ್ಲಿ ಕೈಗೊಳ್ಳಲಾಗಿರುತ್ತದೆ. ಈ ಕಾಮಗಾರಿಗಳು ತುರ್ತು ಕಾಮಗಾರಿಗಳಾಗಿದ್ದು, ಕಾಲುವೆಗಳಲ್ಲಿ ನೀರು ಪೋಲಾಗದಂತೆ ತಡೆಗಟ್ಟಿ, ಪರಿಸ್ಥಿತಿಯನ್ನು ಸರಿದೂಗಿಸಲು, ಸ್ಥಳೀಯ ಗುತ್ತಿಗೆದಾರರಿಗೆ ಕಾಮಗಾರಿಯನ್ನು ವಹಿಸಿ, ಪೂರ್ಣಗೊಳಿಸಿರುವ ಸದರಿ ಕಾಮಗಾರಿಗಳಿಗೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರು ಕರ್ನಾಟಕ ಪಾರದರ್ಶಕತೆ ಅಧ್ಯಾದೇಶ ಅಧಿನಿಯಮ 2000 ಕಲಂ 4(ಎ) ಅಡಿಯಲ್ಲಿ ವಿನಾಯಿತಿಯನ್ನು ನೀಡುವಂತೆ ಕೋರಿರುವುದರಿಂದ, ವ್ಯವಸ್ಥಾಪಕ ನಿರ್ದೇಶಕರ ವರದಿಯನ್ವಯ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ಸದರಿ ನಾಲ್ಕು ಕಾಮಗಾರಿಗಳನ್ನು ಟೆಂಡರ್ ಕರೆಯದೇ ಕೈಗೊಂಡಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಬಹುದಾಗಿದೆ ಹಾಗೂ ಇನ್ನು ಮುಂದೆ ಇಂತಹ ಕಾಮಗಾರಿಗಳನ್ನು ವಿಳಂಬ ಮಾಡದೇ ಸರ್ಕಾರದ ದಿನಾಂಕ:31-05-2016ರ ಸುತ್ತೋಲೆ ಸಂಖ್ಯೆ:ಜಸಂಇ 161 ಎನ್‌ಹೆಚ್‌ಪಿ 2015 ಮತ್ತು KTPP ಅಧಿನಿಯಮದಡಿ ಕೈಗೊಳ್ಳಬೇಕಾಗಿರುತ್ತದೆ ಎಂದು ಎಚ್ಚರಿಕೆ ನೀಡಲಾಯಿತು.

ವಂದನೆಗಳೊಂದಿಗೆ ಸಭೆ ಮುಕ್ತಾಯಗೊಂಡಿತು

(ರಾಕೇಶ್ ಸಿಂಗ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಜಲಸಂಪನ್ಮೂಲ ಇಲಾಖೆ.

Scanned by CamScanner